ಉ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಜಯನಗರ 5ನೇ ಬ್ಲಾಕ್‌ನಲ್ಲಿರುವ ಗ್ರಂಥಾಲಯದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1508 (2197)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಜಯನಗರದ 5ನೇ ಬ್ಲಾಕ್‌ನಲ್ಲಿ ಸಾರ್ವಜನಿಕ ಗ್ರಂಥಾಲಯವಿರುವುದು ನಿಜವೇ?

ಆ ಹಾಗಿದ್ದಲ್ಲಿ ಈ ಗ್ರಂಥಾಲಯವನ್ನು ಮುಚ್ಚಲು ಯಾವುದೇ ಪ್ರಸ್ತಾವನೆ ಇದೆಯೇ

ಇ ಜಯನಗರ 5ನೇ ಬ್ಲಾಕ್ ಬಡಾವಣೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಸೇವೆ ಕೊಡಲಾಗುತ್ತಿದೆಯೇ? ಹಾಗಿದ್ದಲ್ಲಿ ಸರ್ಕಾರವು ಈ ಗ್ರಂಥಾಲಯವನ್ನು ಮುಚ್ಚುವ ಪ್ರಸ್ತಾವನೆಯನ್ನು ಕೈ ಬಿಡುವುದೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಹೌದು.

ಆ ಹಾಲಿ ಗ್ರಂಥಾಲಯವಿರುವ ಕಟ್ಟಡವನ್ನು ಕಟ್ಟಡದ ಮಾಲೀಕರು ಸ್ವಂತ ಉಪಯೋಗಕ್ಕೆ ಬಿಟ್ಟು ಕೊಡಲು ಕೋರಿಕೆ ಸಲ್ಲಿಸಿರುವುದರಿಂದ ಗ್ರಂಥಾಲಯವನ್ನು ಖಾಲಿ ಮಾಡಲಾಗಿದ್ದು ದಿನಾಂಕ :1-3-92 ರಿಂದ ಗ್ರಂಥಾಲಯ ಸೇವೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಆದಷ್ಟು ಬೇಗನೆ ಗ್ರಂಥಾಲಯ ಸೇವೆಯನ್ನು ಪುನ: ಪ್ರಾರಂಭಿಸಲಾಗುವುದು.

ವಿಷಯ:- ಕಾಳಿ ಹೈಡೆಲ್ ಪ್ರಾಜಿಕ್ಟ್ 2ನೇ ಹಂತದಲ್ಲಿ ನಿರಾಶ್ರಿತರಾದ ಕುಟುಂಬದವರಿಗೆ ಕೆ.ಪಿ.ಸಿ.ಯಲ್ಲಿ ನೇಮಕಾತಿ ಮಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1509 (1970)

ಶ್ರೀ ಆರ್.ವಿ.ದೇಶಪಾಂಡೆ (ಹಳಿಯಾಳ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಕಾಳಿ ಹೈಡಲ್ ಪ್ರಾಜೆಕ್ಟ್‌ನ 2ನೇ ಹಂತದಲ್ಲಿ ಜಲ ವಿದ್ಯುತ್ ಯೋಜನೆಗಳಿಂದ ಎಷ್ಟು ಕುಟುಂಬಗಳು ನಿರಾಶ್ರಿತವಾಗಿದೆ.

ಆ ಈ ಪೈಕಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ನಿರಾಶ್ರಿತರ ಕುಟುಂಬದವರಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ನೇಮಕಾತಿ ಮಾಡಲಾಗಿದೆ.

ಇ ಇತ್ತೀಚೆಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ನೇಮಕಾತಿಗಳನ್ನು ಮಾಡುವಾಗ ಜಲ ವಿದ್ಯುತ್ ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದವರಿಗೆ ಈ ನೇಮಕಾತಿಗಳನ್ನು ನೀಡುವಲ್ಲಿ ಅಲಕ್ಷ್ಯ ತೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಈ ಸರ್ಕಾರ ಇನ್ನು ಮುಂದೆ ನೇಮಕಾತಿಗಳನ್ನು ಮಾಡುವಾಗ ನಿರಾಶ್ರಿತರಾದ ಕುಟುಂಬಗಳ ಸದಸ್ಯರುಗಳಿಗೆ ಪ್ರಥಮ ಪ್ರಾಶಸ್ತ್ಯ ನೀಡುವುದು.

ಶ್ರೀ ಎಂ.ರಾಮಪ್ಪ, (ಇಂಧನ ರಾಜ್ಯ ಮಂತ್ರಿಗಳು.)-

ಅ 765

ಆ ಮೂರು (3)

ಇ ನಿಗಮದ ಪ್ರತಿ ನೇಮಕಾತಿಯಲ್ಲಿಯೂ ಸಂತ್ರಸ್ತ ಕುಟುಂಬದ ಅರ್ಹ ಸದಸ್ಯರಿಗೆ ಆದ್ಯತೆ ನೀಡಲಾಗುತ್ತಿದೆ.

ವಿಷಯ: ಕಾಳಿ ಕೈಗಾ ಪುನರ್‌ವಸತಿ ಸಮಿತಿಯನ್ನು ರಚಿಸುವ ಬಗ್ಗೆ

ಚುಕ್ಕೆ ಪ್ರಶ್ನೆ (2107)

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ ಕಾಳಿ ಮತ್ತು ಕೈಗಾ ಪುನರ್ ವಸತಿ ಸಮಿತಿಯನ್ನು ರಚಿಸಲಾಗಿದೆಯೇ.

ಆ ಹಾಗಿದ್ದಲ್ಲಿ 1-4-1990 ರಿಂದ 31-1-1992ರವರೆವಿಗೆ ಎಷ್ಟು ಮೇಲ್ಕಂಡ ಸಮಿತಿ ಸಭೆಗಳು ಯಾವ ಯಾವ ದಿನಾಂಕಗಳಂದು ನಡೆದಿವೆ.

ಶ್ರೀ ಎಂ.ಮಲ್ಲಿಕಾರ್ಜುನ ಖಿರ್ಗೆ (ಕಂದಾಯ ಸಚಿವರು)-

ಅ ಹೌದು.

ಆ ತಾ:1-4-1990 ರಿಂದ 31-1-92ರೊಳಗೆ 3ಸಭೆಗಳು.

ತಾ:18-1-1991, 22-10-1991 ಮತ್ತು 7-1-1992 ರಂದು ನಡೆದಿರುತ್ತವೆ.

ವಿಷಯ: ರಾಜ್ಯದಲ್ಲಿರುವ ಬಿ.ಎಡ್.ಕಾಲೇಜುಗಳ ಕುರಿತು.

ಚುಕ್ಕೆ ರಹಿತ ಪ್ರಶ್ನೆ : 1511 (2100)

ಶ್ರೀ ಮಂಜುನಾಥ.ಸಿ.ಕುನ್ನೂರ (ಶಿಗ್ಗಾಂವ್):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ರಾಜ್ಯದಲ್ಲಿರುವ ಬಿ.ಎಡ್.ಕಾಲೇಜುಗಳ ಸಂಖ್ಯೆ ಎಷ್ಟು (ಸದರಿ ಕಾಲೇಜುಗಳ ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ ರಾಜ್ಯದಲ್ಲಿ ಬಿ.ಎಡ್. ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿಯನ್ನು ಕೋರಿ ಎಷ್ಟು ಅರ್ಜಿಗಳು ಮತ್ತು ಯಾವ ಸಂಸ್ಥೆಗಳಿಂದ ಬಂದಿವೆ?

ಇ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ 63 ಜಿಲ್ಲಾವಾರು ಮಾಹಿತಿ ಅನುಬಂಧ-1 ರಲ್ಲಿ ನಮೂದಿಸಿದೆ.

ಆ 49 ಸಂಸ್ಥೆಗಳ ವಿವರ ಅನುಬಂಧ-2 ರಲ್ಲಿ ನಮೂದಿಸಿದೆ.

ಇ ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯ ಅಂತ್ಯದವರೆವಿಗೆ ಯಾವುದೇ ಬಿ.ಎಡ್. ಕಾಲೇಜಿಗೆ ಅನುಮತಿ ನೀಡದಿರುವುದು.

ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ. ಸಿ. ಕೂನ್ನೂರರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2100ರ ಉತ್ತರದ

ಅನುಬಂಧ-1

ಕ್ರಮ.ಸಂಖ್ಯೆ	ಜಿಲ್ಲೆ	ಬಿ.ಎಡ್.ಕಲೇಜುಗಳ ಸಂಖ್ಯೆ
1	ಬೆಂಗಳೂರು	11
2	ತುಮಕೂರು	4
3	ಕೋಲಾರ	3
4	ಮೈಸೂರು	5
5	ಮಂಡ್ಯ	1
6	ಹಾಸನ	4
7	ಶಿವಮೊಗ್ಗ	1